International Journal of Kannada Research 2015; 1(2): 45-49

International Journal of Kannada Research
www.kannadajournal.com

**ISSN: 2454–5813**
IJSR 2015; 1(2): 45-49
© 2015 IJKS
www.kannadajournal.com
Received: 02-07-2015
Accepted: 07-08-2015

**ಎಸ್.ಬಿ.ಚನ್ನಗೌಡ್ರ**
ಎಂ.ಎ ಕನ್ನಡ ಪ್ರಾಧ್ಯಾಪಕರು
ಹಾಗೂ ಪ್ರಾಂಶುಪಾಲರು
ಬಿ.ಆರ್.ತಂಬಾಕದ ಕಲಾ ವಾಣಿಜ್ಯ ಮತ್ತು ವಿಜ್ಞಾನ ಪ್ರಥಮ ದರ್ಜೆ ಮಹಾವಿದ್ಯಾಲಯ ಹಿರೇಕೆರೂರು, ಕರ್ನಾಟಕ, ಭಾರತ

**Correspondence**
**ಎಸ್.ಬಿ.ಚನ್ನಗೌಡ್ರ**
ಎಂ.ಎ ಕನ್ನಡ ಪ್ರಾಧ್ಯಾಪಕರು
ಹಾಗೂ ಪ್ರಾಂಶುಪಾಲರು
ಬಿ.ಆರ್.ತಂಬಾಕದ ಕಲಾ ವಾಣಿಜ್ಯ ಮತ್ತು ವಿಜ್ಞಾನ ಪ್ರಥಮ ದರ್ಜೆ ಮಹಾವಿದ್ಯಾಲಯ ಹಿರೇಕೆರೂರು, ಕರ್ನಾಟಕ, ಭಾರತ

# ಯೋಗದ ಮಹತ್ವ

**ಎಸ್.ಬಿ.ಚನ್ನಗೌಡ್ರ**

**ಪೀಠಿಕೆ**

ಯೋಗವೆಂದರೇನು ಎಂಬುದನ್ನು ಸಂಕ್ಷಿಪ್ತವಾಗಿಯಾದರೂ ವಿವೇಚಿಸಬೇಕು. ಯೋಗವೆಂದರೆ ಒಂದು ಸಾಧನೆಯೂ ಆಗಬಹುದು ಸಾಧ್ಯವೂ ಆಗಬಹುದು. ಉದಾಹರಣೆಗೆ ಕರ್ಮಯೋಗ, ಭಕ್ತಿಯೋಗ ಇವು ವಿಶಿಷ್ಟ ರೀತಿಯ ಸಾಧನೆಗಳಿಗೆ ಅನ್ವಯಿಸುತ್ತವೆ. ನಿಷ್ಕಾಮ ಮಾರ್ಗವೇ ಕರ್ಮಯೋಗ. ಸಂಪೂರ್ಣ ನಿರುಪಾಧಿಕ ನಿಷ್ಕಾಮ ಭಕ್ತಿಯ ಮೂಲಕ ಮೋಕ್ಷ ಗಳಿಸಿಕೊಳ್ಳುವ ವಿಧಾನವೆ ಭಕ್ತಿಯೋಗ. ಹೀಗೆ ಅದು ಸಾಧನಾ ಮಾರ್ಗಗಳಾದುದರಿಂದ ಕರ್ಮಮಾರ್ಗ, ಭಕ್ತಿಮಾರ್ಗ ಎಂಬ ಹೆಸರು ಅವುಗಳಿಗಿವೆ.’[೧]

ಎರಡನೆಯ ಅರ್ಥದಲ್ಲಿ ಯೋಗ–ಧ್ಯೇಯ ಎಂಬುದಕ್ಕೆ ಒಂದೇ ಅರ್ಥವಿಲ್ಲ. ಅದ್ವೈತದ ಜ್ಞಾನಮಾರ್ಗದಲ್ಲಿ ಆತ್ಮವು ಬ್ರಹ್ಮನಲ್ಲಿ ಬೆರೆತು ಒಂದಾಗುವುದೇ ಯೋಗವಾದರೆ ಸಾಂಖ್ಯಯೋಗ ದಾರ್ಶನಿಕರ ಪ್ರಕಾರ ಆತ್ಮವು ಪ್ರಕೃತಿಯ ವಿಕಾರಗಳಾದ ದೇಹ ಇಂದ್ರಿಯಗಳಿಂದ ಬೇರ್ಪಟ್ಟು ತಾನೊಂದೆ ಇರುವುದೆ ಯೋಗ ಅಥವಾ ಧ್ಯೇಯ ಮರಣಾನಂತರ ಮುಕ್ತಿಯೋಗ್ಯ ಆತ್ಮವು ಕೈಲಾಸಕ್ಕೋ, ವೈಕುಂಠಕ್ಕೋ ಹೋಗುವುದು.’[೨] ಯೋಗ ಪದವನ್ನು ಧ್ಯೇಯ ಎಂಬ ಅರ್ಥದಲ್ಲಿ ತೆಗೆದುಕೊಂಡರೆ ಅದರ ಅರ್ಥಗಳನ್ನು ಈ ರೀತಿ ಕೊಡಬಹುದು.

- ಯೋಗವು ಒಂದು ಅತೀಂದ್ರಿಯ ಮತ್ತು ಅತಿ ಬೌದ್ಧಿಕ ಜ್ಞಾನ ಅಥವಾ ಅನುಭವ.
- ವಿಶಿಷ್ಟ ರೀತಿಯ ಜ್ಞಾನ ಅಥವಾ ಅನುಭವ ಯೋಗಿಗೆ ತನ್ನ ಜಗತ್ತಿನ ಮತ್ತು ಪರಮ ಸತ್ಯದ ಬಗೆಗಿನ
  ಹೊಸ ಜ್ಞಾನವನ್ನು ಕೊಡುತ್ತದೆ.
- ಯೋಗದಿಂದ ಯೋಗಿಯ ಜೀವನವು ಸಂಪೂರ್ಣವಾಗಿ ಅಥವಾ ಒಂದು ಮಹತ್ತರ ರೀತಿಯಲ್ಲಿ ಪರಿವರ್ತನೆಗೆ ಒಳಗಾಗುತ್ತದೆ.
- ಯೋಗದಿಂದಾದ ಅನುಭವವು ಅವನಲ್ಲಿ ಒಂದು ಸಾರ್ಥಕತೆ ಭಾವವನ್ನು ಉಂಟು ಮಾಡುತ್ತದೆ.

ಯೋಗ ಎನ್ನುವ ಪದ ಸಂಸ್ಕೃತ ಮೂಲ ಧಾತುವಾದ ಯುಜ್ ಎನ್ನುವುದರಿಂದ ಬಂದಿದ್ದು, ಬಂಧಿಸು, ಕೂಡಿಸು, ನೊಗಕ್ಕೆ ಕಟ್ಟು, ಚಿತ್ತವನ್ನು ನಿರ್ದೇಶಿಸಿ ಕೇಂದ್ರೀಕರಿಸು, ಉಪಯೋಗಿಸು ಮತ್ತು ಆಸಕ್ತಿವಹಿಸು ಎನ್ನುವ ಅರ್ಥಗಳನ್ನು ಕೊಡುತ್ತದೆ. ಸಂಯೋಜನೆ ಅಥವಾ ಸಂಸರ್ಗ ಎನ್ನುವ ಅರ್ಥವೂ ಇದಕ್ಕೆ ಇದೆ. ಭಗವಂತನ ಇಚ್ಚೆಯೊಂದಿಗೆ ನಮ್ಮ ಇಚ್ಚೆಯ ನಿಜವಾದ ನಿಸರ್ಗವೆಂದರೆ ಇದೆ. ಮಹದೇವ ದೇಸಾಯಿಯವರು ಗಾಂಧೀಜಿಯವರ ದೃಷ್ಟಿಯಲ್ಲಿ ಗೀತೆ ಎನ್ನುವ ಪುಸ್ತಕದ ಪ್ರಸ್ತಾವನೆಯಲ್ಲಿ “ಶರೀರದ ಮನಸ್ಸಿನ ಮತ್ತು ಆತ್ಮದ ಸರ್ವಶಕ್ತಿಗಳನ್ನೂ ಭಗವಂತನೊಡನೆ ಸಂಯೋಜಿಸುವುದು ಯೋಗ. ಇದು ಚಿತ್ತ, ಮನಸ್ಸು, ಭಾವನೆಗಳು, ಇಚ್ಚೆ ಎನ್ನುವ ಯೋಗದ ಮೂಲಭಾವನೆಗಳನ್ನು ಶಿಸ್ತುಗೊಳಿಸುವುದು ಮತ್ತು ಜೀವನದ ಎಲ್ಲ ಅಂಶಗಳನ್ನು ಸಮದೃಷ್ಟಿಯಿಂದ ನೋಡಲು ಸಹಾಯಕವಾಗುವ ಆತ್ಮದ ಒಂದು ನಿಲುವು”[೩] ಎಂದು ಹೇಳುತ್ತಾರೆ. ಯೋಗ ಶಬ್ದವನ್ನು ಯುಜಿರ್ ಯೋಗೇ (ಸೇರಿಸುವುದು) ಮತ್ತು ಯುಜ ಸಮಾಧೌ (ಸಮಾಧಿ, ಏಕಾಗ್ರತೆಯ ಪರಾಕಾಷ್ಠೆ) ಎಂಬ ಎರಡು ಧಾತುಗಳಿಂದಲೂ ವ್ಯುತ್ಪನ್ನ ಮಾಡಲು ಸಾಧ್ಯ. ಈ ಎರಡೂ ಅರ್ಥಗಳಲ್ಲಿ ಅದರ ಪ್ರಯೋಗವನ್ನು ಕಾಣುತ್ತೇವೆ. ಋಗ್ವೇದದ (೫.೮೧.೧) ಯುಂಜತೇ ಮನ ಉತ ಯುಂಜತೇ ಧಿಯೋ ವಿಪ್ರಾಃ (‘[ಯಾವ] ವಿಪ್ರರು ತಮ್ಮ ಮನಸ್ಸನ್ನೂ ಇಂದ್ರಿಯಗಳನ್ನೂ [ಪರಮಾತ್ಮನಲ್ಲಿ] ಸೇರಿಸುತ್ತಾರೆಯೋ’) ಎಂಬ ಮಂತ್ರದಲ್ಲಿ ಯುಜ್ ಧಾತುವನ್ನು ಸೇರಿಸು ಎಂಬರ್ಥದಲ್ಲಿ ಪ್ರಯೋಗಿಸಿದೆ. ಕಠೋಪನಿಷತ್ತು (೬.೧೦.೧೧) ಯೋಗವನ್ನು ಹೀಗೆ ನಿರೂಪಿಸಿರುತ್ತದೆ.

**ಯೋಗ ವಿದ್ಯೆ:** ಕವಿ ಸರ್ವಜ್ಞ ಯೋಗ ವಿದ್ಯೆಯನ್ನು ಕುರಿತು ಹೇಳುತ್ತಾನೆ. ಭಾರತೀಯ ಅಧ್ಯಾತ್ಮಿಕ ಪರಿಕಲ್ಪನೆಯಲ್ಲಿಯೇ ಹುದುಗಿರುವ ಈ ಯೋಗವು ಮನಸ್ಸಿನ ನಿಗ್ರಹದ ಹಾಗೂ ನಮ್ಮ ಸಾಧನೆಯ ಮೆಟ್ಟಿಲುಗಳನ್ನು ಏರಲು ಸಹಾಯಕವಾಗಲು ಇದು ಕೂಡಾ ಒಂದು. ಸರ್ವಜ್ಞನ ದೃಷ್ಟಿಯಲ್ಲಿ ಯೋಗವೆಂಬುದು ಅಷ್ಟದಳ ಕಮಲದ ಮಧ್ಯೆ ಹಂಸವು ನೀರಾಟ ಆಡುವಂತೆ ಮನುಷ್ಯನು ಕೂಡಾ ಅಷ್ಟಾಂಗಗಳನ್ನು ಜಯಿಸಿ ಮೆಟ್ಟಿ ನಿಲ್ಲುವುವನೇ ಯೋಗಿಯಾಗುತ್ತಾನೆ. ಸರ್ವಜ್ಞನ ದೃಷ್ಟಿಯಲ್ಲಿ ಯೋಗವೆಂಬುದು ಮಹಾನ್ ಸಾಧನೆ ಅದನ್ನು ಗೆದ್ದವನೇ ಯೋಗಿಯಾಗುತ್ತಾನೆ. ಯೋಗಿ ಎಂಬ ಪದಕ್ಕೆ ಸರ್ವಜ್ಞ ವಿಶೇಷ ಅರ್ಥ ಕಲ್ಪಿಸಿದ್ದಾನೆ ನಿರ್ಮೋಹಿ, ನಿಸ್ವಾರ್ಥಿ ಎಲ್ಲದನ್ನು ಜಯಿಸಿ ವಿರಕ್ತನಾದವನು.

ಕುಂಡಲಿಯ ಭೇದದ । ಕಂದನಾಡಿಯ ನಡುವೆ ।
ಮಂಡಿಸುತಿರ್ಪ ಹಂಸನ ಹತ್ತಿರವೆ ।
ಕಂಡಿಹುದು ಸುಳುವು ಸರ್ವಜ್ಞ ॥
ತನ್ನ ನಾಭಿಯ ಒಳಗೆ । ವಹ್ನಿ ಮಂಡಲವುಂಟು ।
ವಹ್ನಿ ಮಂಡಲದ ಒಳಗಣ ನಾಡಿಯಲಿ ।
ತನ್ನ ಕಾಣೆಂದ ! ಸರ್ವಜ್ಞ ॥

ಮನುಷ್ಯನ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಯಲ್ಲಿ ಯೋಗವು ಪ್ರಧಾನ ಪಾತ್ರವಹಿಸುತ್ತದೆ. ಮಾನಸಿಕ ಹಾಗೂ ದೈಹಿಕ ಚಲನ–ವಲನಗಳ ಪ್ರಕ್ರಿಯೆಯು ಅವುಗಳ ಗತಿಯಲ್ಲಿ ಬಂಧಮುಕ್ತಗೊಳಿಸಲು ಯೋಗ ಸಾಧಕವಾಗುತ್ತದೆ. ಸರ್ವಜ್ಞ ಹೇಳುವಂತೆ ದೇಹವೆಂಬುದು ಒಂದು ಬೆಂಕಿಯ ಕುಂಡಲ ಆ ಬೆಂಕಿ ಕುಂಡಲದ ಮಂಡಲದೊಳಗೆ ನರ–ನಾಡಿಗಳ, ಚಲನ–ವಲನ ಅವುಗಳ ಸ್ಥಿತಿಗತಿಗಳನ್ನು ಒಂದು ಸಾಧನಾ ವ್ಯವಸ್ಥೆಯಲ್ಲಿ ಒಂದುಗೂಡಿಸಲು ಯೋಗವೆಂಬುದು ಯೋಗ್ಯ ಸಾಧನವಾಗುತ್ತದೆ. ಮಾನವನ ಪರಮಾನಂದ ಬದುಕಿಗೆ ಸಂಪೂರ್ಣವಾದ ಮತ್ತು ವಿಶೇಷವಾದ ಸಾಕ್ಷಾತ್ಕಾರ ಉಂಟಾಗಲು ಪಂಚೇಂದ್ರಿಯಗಳ ಸಮತ್ವವೆಂಬುದು ಬಹು ಮುಖ್ಯವಾದುದು. ಸಂಸಾರ ಸುಖಕ್ಕೆ, ಆತ್ಮ ಸಾಕ್ಷಾತ್ಕಾರಕ್ಕೆ ಯೋಗವು ಭೌತಿಕ ವಸ್ತುಗಳಲ್ಲಿ ಮನಸ್ಸನ್ನು ನಿಲ್ಲಿಸಿ ಅಹಂಕಾರವನ್ನು ಅಡಗಿಸಿ ಅಂತಃಕರಣದಲ್ಲಿ ಲೀನವಾಗಿ ಮುಂದುವರೆಯುತ್ತದೆ. ಈ ನೆಲೆಯಲ್ಲಿಯೇ ಸರ್ವಜ್ಞ ಮನಸ್ಸಿನ ನೆಮ್ಮದಿಯನ್ನು ಕಲಕಿ, ಬಗ್ಗಡಗೊಳಿಸಿ ದುಡುಕಲು ಹಚ್ಚಿ ಕೇಡನ್ನು ಮಾಡಿಸುವ ಕೆಟ್ಟಗಳಿಗೆ–ಪ್ರಸಂಗಗಳು ಮನುಷ್ಯನನ್ನು ಹೆಜ್ಜೆ ಹೆಜ್ಜೆಗೂ ಕಾಡುತ್ತವೆ. ಇಂತಹ ಸಂದರ್ಭಗಳಲ್ಲಿ ಮನಸ್ಸಿನ ಸಮತೋಲನವನ್ನು ಕಾಯ್ದುಕೊಳ್ಳುವುದು ಕ್ಷೇಮಕರ.

ಸಾವಿಂಗೆ ಅಮತಿಂಗೆ । ಆವುದಂತರವಯ್ಯ ।
ಸಾವು ತಾ ಸಮತೆಗಳವಲ್ಲ, ಕೋಪವನು ।
ತಾವುದೇ ಸಮತೆ ಸರ್ವಜ್ಞ ॥

ಕವಿ ಸರ್ವಜ್ಞನ ಆಶಯದಂತೆ ಸಮತ್ವವೆಂಬುದು ಜೀವನದ ಅಂತಿಮ ಘಟ್ಟದ ಕಲ್ಪನೆಯಾಗಿದೆ. ಸಾವು ಮತ್ತು ಸಮತ್ವ ಇವೆರಡರಲ್ಲಿ ಕವಿ ಒಂದೇ ಅರ್ಥವನ್ನು ಕಾಣುತ್ತಾನೆ. ಇವೆರಡರಲ್ಲಿಯೂ ಯಾವ ಅಂತರವು ಇಲ್ಲ. ಮನಸ್ಸಿನ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಲ್ಲ ಅಳಿದ ಮೇಲೆ ಈ ಭೌತಿಕ ದೇಹ ಸಾವು ಕಂಡಂತೆಯೇ ಆಗುತ್ತದೆ. ಹೀಗಾಗಲು ಯೋಗವೆಂಬುದು ಈ ಸಮತೆಗೆ ತಂದು ನಿಲ್ಲಿಸಬಹುದು. ಕೋಪವನ್ನು ತಾಳುವುದೇ 'ಸಮತೆ' ಸಮಧಾನ ಚಿತ್ತದ ಸೈರಣೆ. ಈ ಸಮತೆ ಒಂದು ದೃಷ್ಟಿಯಿಂದ ಸಾವಿಗಿಂತಲೂ ಮಿಗಿಲಾದುದು, ಕಷ್ಟಕರವಾದುದು. ಏಕೆಂದರೆ ಕೋಪ ಬಂದಾಗ ಅದನ್ನು ಹತೋಟಿಯಲ್ಲಿಟ್ಟುಕೊಳ್ಳುವುದು, ಮನಸ್ಸಿನ ಸ್ಥಿಮಿತವನ್ನು ಕಾಯ್ದುಕೊಳ್ಳುವುದು ಪ್ರಾಣ ನೀಗುವುದಕ್ಕಿಂತಲೂ ಕಷ್ಟಕರವಾದುದು. ಒಂದು ಸಾರಿ ಹೆಚ್ಚು ಧೈರ್ಯಮಾಡಿ ಸಾವನ್ನು ಅಪ್ಪಿಕೊಳ್ಳಬಹುದು ಆದರೆ ಬದುಕಿನುದ್ದಕ್ಕೂ ಸ್ಫೋಟಕ ಸಂದರ್ಭಗಳಲ್ಲಿ ಕ್ರೋಧವನ್ನು ಸಂಯಮಿಸುವುದು ಸುಲಭದ ಮಾತಲ್ಲ. ಹಾಗೆ ಮಾಡುವುದರಿಂದ ಪರಮ ಪ್ರಯೋಜನವುಂಟು. ಯೋಗದಿಂದ ನಾವು ಎಲ್ಲವನ್ನು ಜಯಿಸಬಹುದು ಎಂಬ ಸೂಚ್ಯ ಅರ್ಥವನ್ನು ನೀಡುತ್ತಾನೆ. ಒಡಲೆಂಬ ಹುತ್ತಕ್ಕೆ ನುಡಿವ ನಾಲಗೆ ಸರ್ಪ, ಕಡುರೂಪವೆಂಬ ವಿಷವೇರಿ ಸಮತೆ ಗಾರುಡಿಗನಂತಿಕ್ಕು ಸರ್ವಜ್ಞ. ಈ ದೇಹವೆಂಬ ಹುತ್ತಕ್ಕೆ ಸರ್ಪವೆಂಬ ನಾಲಗೆಗೆ ಯೌವ್ವನ ಎಂಬ ವಿಷವೇರಿದಾಗ ಮಾನವ ತನ್ನ 'ಸಮತ್' ಸ್ಥಿತಿಯನ್ನು ಕಳೆದುಕೊಂಡು ಎಂಥ ವಿಷವನ್ನಾದರೂ ಕಾರಬಹುದು. ವಿಷದಿಂದ ಎಂತಹವರನ್ನಾದರೂ ಕೊಲ್ಲಬಹುದು, ಎಂತೆಂತಹ ಅನಾಹುತಗಳನ್ನಾದರೂ ಸೃಷ್ಟಿಸಬಹುದು. ಆದ್ದರಿಂದ ಅಂತಹ ವಿಷ ನಾಲಗೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲು 'ಯೋಗ' ಎಂಬ ಗಾರುಡಿ ವಿದ್ಯೆಯೇ ಸಮತೆ ಎಂಬ ಎಚ್ಚರಿಕೆ ನೀಡುತ್ತಾನೆ. ಈ ರೀತಿಯ ಸ್ವಭಾವ ಮನುಷ್ಯನಿಗೆ ಪ್ರಕೃತಿ ದತ್ತವಾಗಿಯೇ ಬರುತ್ತದೆ. ಅಂತಹ ಸ್ವಭಾವವನ್ನು ಸಮತ್ವ ಸ್ಥಿತಿಗೆ ತರಲು ಯೋಗವೆಂಬುದು ಅತಿ ಅವಶ್ಯ ಎಂಬುದನ್ನು ಮನಗಾಣಿಸುತ್ತಾನೆ.

ಕಾಶಿಯ ನುಡಿ ಬೇಡ । ಕ್ಲೇಶದಲಿ ಕೆಡಬೇಡ ।
ಸಾಸಿರದ ಜಡೆಯ ಹೊರಬೇಡ, ಸಮತೆಯ ।
ಭ್ಯಾಸದೊಳಗಿರಲು ಸರ್ವಜ್ಞ ॥

ಯೋಗದಿಂದ ಸಾಧಿಸಿದ ಸಮತ್ವವನ್ನು ಅದರ ಅಸ್ಮಿತತೆಯನ್ನು ಯಾವುದರಿಂದಲೂ ಹೊಂದಲು ಸಾಧ್ಯವಿಲ್ಲ. ನಾವು ಯೋಗ ಸಾಧಕರಾಗಲು ಕಾಶಿಗೆ ಹೋಗಿ, ಜಟಾಧಾರಿಗಳಾಗಿ ಯೋಗ ಸಿದ್ಧಿಸುವುದು ಹಸಿ ಸುಳ್ಳು. ನಮ್ಮ ಮನಸ್ಸಿನ ಭಾವನೆಗಳು ಕಾಮನೆಗೊಳ್ಳಲು ನಮ್ಮ ಮನಸ್ಸೇ ಕಾರಣ. ಅದರಿಂದ ಮುಕ್ತಿಗೊಳಿಸಲು ಯೋಗಿಗಳಾಗಿ, ಸಾದು–ಸಂತರಾಗಿ, ತಪಸ್ಸು ಗೈದು ಮೋಕ್ಷ ಪಡೆಯುತ್ತೇವೆಂಬ ಕಲ್ಪನೆಗೆ ಸರ್ವಜ್ಞನ ವಿರೋಧವಿದೆ. ಜೀವನದಲ್ಲಿ ಸಾಧನೆ ಮಾಡಬೇಕೆಂದರೆ ನಮ್ಮ ಮನಸ್ಸನ್ನು ನಿಗ್ರಹಿಸಿದರೆ ಮಾತ್ರ ಸಾಧ್ಯ. ನಿಗ್ರಹವು ಸಮತಾ ಭಾವದ ಯೋಗದಿಂದ ಮಾತ್ರ ಸಾಧ್ಯವೆಂಬುದನ್ನು ಸೂಚಿಸುತ್ತಾನೆ. ಸರ್ವಜ್ಞನ ದೃಷ್ಟಿಯಲ್ಲಿ ಯೋಗವೆಂಬುದು ಪವಿತ್ರವಾದ ಶಕ್ತಿ. ಉಪನಿಷತ್ತಿನಲ್ಲಿರುವಂತೆ ಮಂತ್ರಯೋಗ, ಲಯಯೋಗ, ಹಠಯೋಗ ಮತ್ತು ರಾಜಯೋಗ. ಈ ಚತುರ್ವಿಧ ಯೋಗಗಳನ್ನು ಗೆದ್ದರು ಒಮ್ಮೊಮ್ಮೆ ನಮ್ಮೊಳಗಿರುವ ಶಕ್ತಿಗಳು ವಿಕಸಿತಗೊಂಡು, ಪರಮ ಚೈತನ್ಯ ಆತ್ಮನೊಂದಿಗೆ ಸಾಕ್ಷಾತ್ಕಾರ ಪೂರ್ಣ ಪರಮಾನಂದ ಹೊಂದಿದ್ದರು, ಈ ಯೋಗದಲ್ಲಿ ವಿಘ್ನಗಳನ್ನು ಕಂಡ ಋಷಿ ಮುನಿಗಳನ್ನು ಕಾಣಬಹುದು. ಆ ವಿಘ್ನಗಳು ಬರುವ ರೀತಿಯನ್ನು ಸರ್ವಜ್ಞ ತನ್ನ ತ್ರಿಪದಿಗಳಲ್ಲಿ ಯೋಗ ವಿಘ್ನದ ಸ್ವರೂಪವನ್ನು ಅದರ ರೂಪಗಳನ್ನು ಬಹು ಮನೋಜ್ಞವಾಗಿ ಚಿತ್ರಿಸುತ್ತಾನೆ. ಯೋಗಿಗೆ ಕೋಪ ಸಲ್ಲದು, ಯೋಗವನ್ನು ಜಯಿಸಿದವನು ಕೋಪವನ್ನು ತ್ಯಜಿಸಬೇಕಾಗುತ್ತದೆ. ಇಲ್ಲದಿದ್ದರೆ ಆ ಯೋಗಿಯ ಬದುಕು ಪಾಪದ ನೆಲೆಗಟ್ಟಾಗಿ ನರಕದಲ್ಲಿ ಒದ್ದಾಡುವಂತಹ ಸ್ಥಿತಿ ಬಂದೊದಗಬಹುದು. ಆದ್ದರಿಂದ ಯೋಗ ಸಾಧನೆ ಮಾಡಿದವರು ಇಂತಹ ಕೋಪವನ್ನು ತ್ಯಜಿಸಬೇಕೆಂಬ ಮುಕ್ತ ಸೂಚನೆಯನ್ನು ಕವಿ ನೀಡಿದಂತಿದೆ. ಹಾಗೆಯೇ ಮುಂದುವರೆದು ಮನುಷ್ಯ ಸ್ವಭಾವದ ವಿಕಾರಗಳನ್ನು ತ್ಯಜಿಸುವುದು ಎಷ್ಟು ಕಷ್ಟಕರವಾಗುತ್ತದೆ ಎಂಬುದನ್ನು ತನ್ನ ತ್ರಿಪದಿಯಲ್ಲಿ ಮನಗಾಣಿಸುತ್ತಾನೆ.

ಜಡೆಯ ಕಟ್ಟಲುಬಹುದು । ಕಡವಸವ ನುಡಬಹುದು ।
ಬಿಡದೆ ದೇಗುಲದೊಳಿರಬಹುದು, ಕರಣಗಳ ।
ತಡೆಯುವದೆ ಕಷ್ಟ ಸರ್ವಜ್ಞ ॥

ಯೋಗ ಸಾಧಕನಾದವನಿಗೆ ಎಲ್ಲದೂ ಸಾಧ್ಯವಾಗುತ್ತದೆ ಎಂದು ಹೇಳುವಲ್ಲಿ ಪೌರಾಣಿಕ ಋಷಿಮುನಿಗಳ ದೃಷ್ಟಾಂತಗಳನ್ನು ಇಟ್ಟುಕೊಂಡು ಇಂದಿನ ಮಾನವ ಪೀಳಿಗೆಗೆ ಮನುಷ್ಯನ ಚಂಚಲ ಸ್ವಭಾವದ ಅರಿವನ್ನು ಮನಗಾಣಿಸುತ್ತಾನೆ. ಮಹತ್ ಸಾಧನೆ ಮಾಡಲು ಮನುಷ್ಯ ಜಡೆಯ ಕಟ್ಟಿ ಚರ್ಮದುಡುಗೆಯ ಉಡಬಹುದು, ದೇಗುಲದಲ್ಲಿ ಸನ್ಯಾಸಿಯಾಗಿ ಮಹಾಯೋಗಿಯೆನಿಸಿಕೊಳ್ಳಬಹುದು, ಆದರೆ ತನ್ನ ಸ್ವಭಾವದ ಆಸೆಗಳನ್ನು ನಿಗ್ರಹಿಸುವುದು ಸಾಧ್ಯವಾಗುವುದಿಲ್ಲ, ಅಷ್ಟೇ ಏಕೆ ನಾವು ಯೋಗ ಪುರುಷರೆನಿಸಿಕೊಳ್ಳಲು ದಟ್ಟಾರಣ್ಯದಲ್ಲಿ ಕುಳಿತು ಹಲವು ವರ್ಷ ತಪಸ್ಸು ಮಾಡಿ, ಮಡದಿಯನ್ನು ತ್ಯಜಿಸಿ ಮಕ್ಕಳಿಂದ ದೂರವಾಗಿ ಮನೆಯಿಂದ ನಿರ್ಗಮಿಸಿ ಧ್ಯಾನ ಮುಕ್ತರಾದರು ಸಂಸಾರವೆಂಬ ವಾಸನೆ ಹೋಗದೆ ಇರದು. ಆದ್ದರಿಂದಲೇ ಸಾಧಕ ಪುರುಷರಾದವರು ವಿಘ್ನಗಳಿಂದ ದೂರವಾಗಿಲ್ಲ ಎಂಬ ಎಚ್ಚರಿಕೆಯನ್ನು ನೀಡುತ್ತಾನೆ. ಶಿವಯೋಗಿಯಾದವನು ಕೂಡಾ ಹೆಣ್ಣೆಂಬ ಮೋಹದಲ್ಲಿ ಸಿಲುಕಿ ಮಣ್ಣು ಮಸಿಯಾದ ವಿಚಾರನ್ನು ಸರ್ವಜ್ಞ ಹೇಳುವ ರೀತಿ ಅತ್ಯಂತ ಮನೋಜ್ಞವಾಗಿದೆ. ಬೆಣ್ಣೆ ಬೆಂಕಿಯ ನಡುವೆ ತಣ್ಣಗಿರಬಲ್ಲುದೆ ಹೆಣ್ಣಿರ್ದ ಮನೆಗೆ ಎಡತಾಕಿ ಶಿವಯೋಗಿ ಮಣ್ಣುಮಸಿಯಾದ ಸರ್ವಜ್ಞ, ಹೀಗೆ ಸರ್ವಜ್ಞನು ಯೋಗ ವಿಘ್ನಗಳನ್ನು ತನ್ನ ತ್ರಿಪದಿಯಲ್ಲಿ ಹೇಳುತ್ತಾನೆ. ಯೋಗವನ್ನು ಕುರಿತು ಸಹಸ್ರ ಪುಸ್ತಕಗಳು ರಚನೆಯಾಗಿದ್ದರು, ಅದನ್ನು ಸಾಧಿಸುವ ಅನೇಕರನ್ನು ನಾವು ನೋಡಿದ್ದರು, ಅದರ ಬಗ್ಗೆ ಒಂದು ಸ್ಪಷ್ಟ ನಿರ್ದಿಷ್ಟ ವ್ಯಾಖ್ಯೆ ನಮಗೆ ಲಭ್ಯವಾಗಿಲ್ಲದಿದ್ದರು ಅಲ್ಪ ಸಲ್ಪ ಇತಿಹಾಸಕ್ಕೆ ದೂರವಾಗಿರುವುದಲ್ಲದೆ ಪೌರಾಣಿಕ ಭಾಷೆಯಲ್ಲಿ ಶಿವನೆ ಮೊದಲ ಯೋಗಿ ಎಂದು ಕಾಣಬಹುದು. ಯೋಗಿಯು ಕರ್ಮವನ್ನು ಬಿಡುವುದಿಲ್ಲ. ತನ್ನ ಕರ್ಮಕ್ಕೆ ಕಟ್ಟಿಹಾಕುವ ಬಂಧನಗಳನ್ನು ಮಾತ್ರ ಕಡಿದು ಹಾಕುತ್ತಾನೆ. ಕರ್ಮ ಫಲವನ್ನು ದೇವರಿಗಾಗಿ ಜನರಿಗಾಗಿ ತ್ಯಜಿಸುತ್ತಾನೆ. ತನ್ನ ಕರ್ತವ್ಯ ಮಾಡುವುದಕ್ಕೆ ಮಾತ್ರ ಹಕ್ಕಿದೆಯೆಂದು ಅದರ ಫಲದ ಹಕ್ಕು ತನಗಿಲ್ಲವೆಂದು ಆತನು ತಿಳಿಯುತ್ತಾನೆ.'[೪] ಯೋಗಿಯು ಪ್ರಪಂಚವನ್ನು ತ್ಯಜಿಸುವುದಿಲ್ಲ ಏಕೆಂದರೆ ಆತ ಹಾಗೆ ಮಾಡಿದರೆ ದೇವರನ್ನೇ ನಿರಾಕರಿಸಿದಂತೆ. ದೇವರಿಂದ ತನ್ನನ್ನು ದೂರಕ್ಕೆ ಕೊಂಡೊಯ್ಯುವ ಎಲ್ಲ ವಸ್ತುಗಳನ್ನು ಯೋಗಿ ತ್ಯಜಿಸುತ್ತಾನೆ. ತನ್ನ ಪ್ರಚೋದನೆ ಮತ್ತು ಸತ್ಕರ್ಮಕ್ಕೆ ಸ್ಪೂರ್ತಿ ದೇವರಿಂದಲೇ ಬರುತ್ತದೆಂದು ಕಾಮವನ್ನು ವಿಸರ್ಜಿಸುತ್ತಾನೆ. ದೇವರ ಕಾರ್ಯವನ್ನು ಅಲ್ಲಗಳೆದು ಕೆಟ್ಟ ಅಭಿಪ್ರಾಯ ಹಾಗೂ ನೀತಿ ಮಾತುಗಳನ್ನಾಡಿ ಅದರಂತೆ ನಡೆಯದವರನ್ನು ಯೋಗಿ ಖಂಡಿತ ತ್ಯಜಿಸುತ್ತಾನೆ. ಯೋಗಿಯ ದೃಷ್ಟಿಯಲ್ಲಿ ಎಲ್ಲ ಜೀವಿಗಳಿಗೂ ಈ ಲೋಕದಲ್ಲಿ ಜೀವಿಸಲು ಸಮಾನ ಹಕ್ಕಿದೆ. ತಾನು ಹುಟ್ಟಿರುವುದೇ ಇತರರ ಉಪಕಾರಕ್ಕೆ ಎಂಬುದು ಯೋಗಿಯ ನಂಬಿಕೆ. ಆತನು ಎಲ್ಲರನ್ನು ಪ್ರೇಮ ದೃಷ್ಟಿಯಿಂದಲೇ ನೋಡುತ್ತಾನೆ. ತನ್ನಂತೆ ಇತರರಿಗೂ ಸುಖ ಸಂತೋಷಗಳ ಆಶಾಕಿರಣವಾಗಿರಿಸುತ್ತಾನೆ. ಪೋಷಕರು ಮಕ್ಕಳಿಗೆ ಹೆಜ್ಜೆಗಳನ್ನು ಇಡಲು ಕಲಿಸುವಂತೆ ಯೋಗಿಯು ನತದೃಷ್ಟರಾದವರಿಗೆ ಉತ್ತೇಜನವನಿತ್ತು ಬದುಕಲು ಸಹಾಯ ಮಾಡುತ್ತಾನೆ. ಯೋಗಿಯಾದವನು ಯಾವಾಗಲೂ ತಾನೂ ಪರಿಪೂರ್ಣನಾಗಲು ಪ್ರಯತ್ನಿಸುತ್ತಾನೆ. ತಾನೂ ಪ್ರೇಮದಿಂದ ಕರುಣೆಯಿಂದ ನಡೆದು ಇತರರು ಜೀವಿಸಲು ಕಲಿಸುತ್ತಾನೆ.

ಯೋಗಿಯು ತಪ್ಪು ಮಾಡುವವನಲ್ಲಿರುವ ತಪ್ಪನ್ನು ಮಾತ್ರ ಎದುರಿಸುತ್ತಾನೆ. ಆದರೆ ತಪ್ಪು ಮಾಡುವುದಿಲ್ಲ, ತಪ್ಪಿಗೆ ಪ್ರಾಯಶ್ಚಿತ್ತವನ್ನಲ್ಲದೆ ದಂಡವನ್ನು ವಿಧಿಸುತ್ತಾನೆ. ತಪ್ಪಿಗೆ ವಿರೋಧ, ತಪ್ಪಿತಸ್ಥನಿಗೆ ಪ್ರೇಮ ಇವು ಒಂದರ ಪಕ್ಕದಲ್ಲಿ ಒಂದು ನಿಲ್ಲಬಹುದು. ಅದು ಹೇಗೆ ಎಂದರೆ ಕುಡುಕನ ಹೆಂಡತಿ ಕುಡಿತವನ್ನು ವಿರೋಧಿಸುವಂತೆಯೇ ಗಂಡನನ್ನು ಪ್ರೇಮಿಸುತ್ತಾಳೆ, ಯೋಗಿಯೂ ಹೀಗೆಯೇ. ಯೋಗಿಯಾದವನು ತಪ್ಪು ಮಾಡಿದವನ ತಪ್ಪನ್ನು ಮನಗಾಣಿಸಿ ಆ ತಪ್ಪಿತಸ್ಥನನ್ನು ಒಳ್ಳೆಯ ಮಾರ್ಗದಿಂದ ಕೊಂಡೊಯ್ಯಲು ಬಯಸುತ್ತಾನೆ. ಅವನ ವಿಚಾರದಲ್ಲಿ ಪ್ರೇಮದಿಂದ ಹೋರಾಡುವುದರಿಂದ ದ್ವೇಷವೂ ಗೆಲ್ಲುತ್ತದೆ. ತಾಯಿ ಮಗುವನ್ನು ಅತಿಯಾಗಿ ಪ್ರೀತಿಸುತ್ತಾಳೆ. ಆ ಮಗು ದುಶ್ಚಟಗಳನ್ನು ಮಾಡುವಾಗ ಮಗುವನ್ನು ದಂಡಿಸುತ್ತಾಳೆ ಇದೇ ಅಲ್ಲವೇ ಪ್ರೇಮವೆಂದರೆ. ಅಹಿಂಸೆಯನ್ನು ನಿಜವಾಗಿ ಪಾಲಿಸುವವನು ತನ್ನ ಶತ್ರುವನ್ನು ಪ್ರೇಮದಿಂದಲೇ ಕಾಣುತ್ತಾನೆ.'[೫]ಯೋಗಿಯಾದವನು ತನ್ನ ಮನಸ್ಸು ಅವ್ಯವಸ್ಥಿತವಾದರೆ ತನ್ನಲ್ಲಿ ತಾನೇ ದುಗುಡಗೊಳ್ಳುತ್ತಾನೆ. ತನ್ನ ಅಭ್ಯಾಸ ಅನುಭವಗಳು ತಪ್ಪು ಮಾಡದಂತೆ ತಡೆಯುತ್ತಾನೆ. ತನ್ನ ತಪ್ಪಿನ ವಿಚಾರದಲ್ಲಿ ತಾನು ತೀಕ್ಷ್ಣನಾಗಿ ಪರರ ತಪ್ಪಿನ ವಿಚಾರದಲ್ಲಿ ಮೃದುವಾಗುತ್ತಾನೆ. ಮನಸ್ಸಿನ ಮೃದುತ್ವವೇ ಯೋಗ್ಯ ಯೋಗಿಯ ಲಕ್ಷಣ. ಇಂತಹ ಯೋಗ್ಯ ಯೋಗಿಯ ಕುರಿತು ಸರ್ವಜ್ಞನ ಲೋಕದೃಷ್ಟಿ ಎಷ್ಟು ತೀಕ್ಷ್ಣವಾಗಿತ್ತು ಎಂಬುದನ್ನು ಆತನ ತ್ರಿಪದಿಗಳಲ್ಲಿ ಸೂಕ್ಷ್ಮವಾಗಿ ಗಮನಿಸಬಹುದು. ಯೋಗ್ಯ ಯೋಗಿಯ ಲಕ್ಷಣಗಳನ್ನು ಹೇಳುವಾಗ ಆತನ ಗುಣಗಳನ್ನೇ ಮುಖ್ಯ ಆಕರವಾಗಿಟ್ಟುಕೊಂಡು ಪರಿಚಯಿಸುತ್ತಾನೆ. 'ಕೋಪಕ್ಕೆ ಯಮರಾಯ, ಪಾಪಕ್ಕೆ ಜವರಾಯ, ಕೋಪ–ಪಾಪಗಳ ಅಳಿದಂಗೆ ಯಮನು ತಾ ಕೂಪನಾಗಿಹನು ಸರ್ವಜ್ಞ' ಸೂಕ್ಷ್ಮವಾಗಿ ಗಮನಿಸಿದಾಗ ಕೋಪವೇ ನಮ್ಮ ಜೀವನದ ಅನರ್ಥಗಳಿಗೆ ಕಾರಣವಾಗುತ್ತದೆ. ಈ ಕೋಪವನ್ನು ಅಳಿದವನಿಗೆ ಯಮರಾಯನು ತಲೆಬಾಗಬಹುದೆಂಬ ಸಂದೇಶವನ್ನು ನೀಡುತ್ತಾನೆ.

ಯೋಗಿಯಾದವನಿಗೆ ಸರ್ವಜ್ಞ ನೀಡುವ ಈ ಸಂದೇಶ ಯೋಗಿಯನ್ನು ಲೋಕಮಾನ್ಯನನ್ನಾಗಿಸುವ ಪರಿ ಅನನ್ಯವಾಗಿದೆ. ಹಾಗೆಯೆ ಯೋಗಿಯಾದವನು ಸುಖ ಮತ್ತು ದುಃಖಗಳನ್ನು ಸಮನಾಗಿ ಕೊಂಡೊಯ್ಯುತ್ತಾನೆ. ಸರ್ವಜ್ಞನ ದೃಷ್ಟಿಯಲ್ಲಿ ಸುಖ ಹಾಗೂ ದುಃಖಗಳನ್ನು ಸಮನಾಗಿ ಸ್ವೀಕರಿಸುವ ಗುಣವಿರಬೇಕು. ಸುಖವನ್ನು ಸ್ವೀಕರಿಸಿ ದುಃಖದಿಂದ ದೂರವಿರಲು ಪ್ರಯತ್ನಿಸುವವನಿಗೆ ಶಾಶ್ವತ ಸುಖ ದೊರೆಯಲಾರದು. ಕೋಪ ಎಂಬುದು ಪಾಪದ ನೆಲಗಟ್ಟು ಆ ಕೋಪದಿಂದ ಬಂದ ಆಪತ್ತನ್ನು ಸುಖವೆಂದು ಸ್ವೀಕರಿಸುವವನಿಗೆ ಪಾಪವೆಲ್ಲಿಹುದೆಂದು ಕೇಳುತ್ತಾನೆ. ಸುಖ ದುಃಖದಲ್ಲಿ ಸಮಭಾಗಿಯಾದವನು ಯೋಗಿ ಎನಿಸುತ್ತಾನೆ.ಜಾತಿ, ದೇಶ, ಕಾಲ ಹಾಗೂ ಸಮಯದಿಂದ ಅನವಚ್ಛಿನ್ನ ಎಂದರೆ ಅಪ್ರತಿಬದ ್ಧ ಇವುಗಳ ಸೀಮೆಯ ಬಂಧನದಿಂದ ಮೇಲಕ್ಕೆದ್ದು ಈ ಹಿಂಸಾದಿಗಳನ್ನು ಚಿತ್ತದ ಎಲ್ಲಾ ಸ್ಥಿತಿಗಳಲ್ಲೂ ಪಾಲನೆ ಮಾಡಬಹುದಾದರೆ ಈ ಅಹಿಂಸಾ ವಾದಗಳು ಮಹಾ ವ್ರತಗಳೆನಿಸುತ್ತವೆ. ಈ ವ್ರತಗಳ ಪಾಲನೆಯನ್ನು ಮಾಡುವುದರಲ್ಲಿ ಸಾಮಾನ್ಯ ವ್ಯಕ್ತಿಯ ದೃಷ್ಟಿಯಿಂದ ನೋಡಿದರೆ ಬಹಳ ಕಷ್ಟಗಳು ಬರುತ್ತವೆ. ಆದ್ದರಿಂದ ವ್ಯಕ್ತಿಯು ಕೆಲವು ಸೀಮೆಗಳನ್ನು ನಿರ್ಧರಿಸುತ್ತಾನೆ. ಈ ಅಹಿಂಸಾ ಸತ್ಯಾದಿ ವ್ರತಗಳನ್ನು ಜಾತಿ ವರ್ಗ, ದೇಶ, ಕಾಲ, ಮತ್ತು ಸಮಯ ವಿಶೇಷಗಳ ಮಿತಿಯಲ್ಲಿ ಕಟ್ಟಿಹಾಕುತ್ತಾನೆ. ಉದಾಹರಣೆಗೆ ಅಹಿಂಸೆಯನ್ನು ತೆಗೆದುಕೊಂಡರೆ, ಒಬ್ಬ ಮೀನುಗಾರ ಮೀನನ್ನು ಕೊಂದು ತಿನ್ನುತ್ತಾನೆ, ಮತ್ತು ಮಾರುತ್ತಾನೆ. ಇದು ಹಿಂಸಾ ವಿಶೇಷವಾದರೆ ಅದೇ ಮೀನುಗಾರ ಹಸು, ಕುರಿ, ಆಡುಗಳನ್ನು ಕೊಲ್ಲುವುದಿಲ್ಲ. ಹೀಗಾಗಿ ಅವನದು ಅಹಿಂಸಾ ವಿಶೇಷವಾಯಿತು. ಹೀಗೆ ಸರ್ವಜ್ಞನ ದೃಷ್ಟಿಯಲ್ಲಿ ಯೋಗಿಯಾದವನಿಗೆ ಕುಲ, ಹೊಲೆ ಇರುವುದಿಲ್ಲ ಎಂದು ಹೇಳುವಲ್ಲಿ 'ಹೊಲೆಯಿಲ್ಲ ಅರಿದಂಗೆ, ಬಲವಿಲ್ಲ ಬಡವಂಗೆ,

ತೊಲೆಕಂಬವಿಲ್ಲ ಗಗನಕ್ಕೆ ಯೋಗಿಗೆ ಕುಲವೆಂಬುದೆ ಇಲ್ಲವೆನ್ನುತ್ತಾನೆ.'

ಮುಟ್ಟಿನ ಹೊಲೆಯೊಳಗೆ । ಹುಟ್ಟಿಹನು ಶಿವಯೋಗಿ ।
ಮುಟ್ಟದದು ಮಲಿನ ವಾರಿಯನು, ಆ ಹೊಲೆಯ ।
ಸುಟ್ಟೊರಸಿ ಕಳೆದ ಸರ್ವಜ್ಞ ॥

ಬ್ರಹ್ಮಾಂಡವೆಂಬುದು ಬಯಲು ಆಲಯವಾಗಿದೆ ಈ ಬಯಲು ಆಲಯಕ್ಕೆ ತೊಲೆಕಂಬಗಳಿಲ್ಲ. ಸೃಷ್ಟಿಕರ್ತನ ಈ ಸೃಷ್ಟಿಗೆ ನಾವು ತಲೆಬಾಗಲೇಬೇಕು. ಇಡೀ ಭೂಮಂಡಲದ ಮೇಲುಹೊದಿಕೆಯಾಗಿರುವ ಗಗನಕ್ಕೆ ತೊಲೆಕಂಬಗಳಿಲ್ಲವೆನ್ನುತ್ತಾನೆ ಸರ್ವಜ್ಞ, ಅದು ಅಕ್ಷರಶಃ ಸತ್ಯ. ಏಕೆಂದರೆ ಈ ವಿಚಿತ್ರ ನಮ್ಮ ಕಣ್ಣೆದುರಿಗೆ ಕಾಣುವಂತಹದ್ದು. ಈ ಪ್ರಕೃತಿಯ ನಿಯಮವನ್ನು ಅರಿದವನಿಗೆ ಯಾವುದು ಹೊಲೆಯಾಗುವುದಿಲ್ಲ ಗಗನಕ್ಕೆ ಹೇಗೆ ತೊಲೆಕಂಬಗಳಿಲ್ಲವೋ ಹಾಗೆಯೇ ನಿಜವಾದ ಯೋಗಿಗೆ ಕುಲವೆಂಬುದೆ ಇರುವುದಿಲ್ಲ. ಸರ್ವಜ್ಞನ ಈ ಸಮಯೋಚಿತ ಅರಿವೆಂಬುದು ಬಹಳ ದೂರದೃಷ್ಟಿಯಿಂದ ಕೂಡಿದೆ. ಗಗನಕ್ಕೆ ಆದಿ ಅಂತ್ಯಗಳಿಲ್ಲ ವಿಶಾಲವಾಗಿ ಹರಡಿದೆ ಹಾಗೆಯೇ ಮಾನವನು ತನ್ನ ಮುಕ್ತವಾದ ವಿಚಾರಗಳಿಗೆ ಯಾವುದೇ ಜಾತಿ, ಮತ, ಪಂಥಗಳ ಗೋಡೆ ಹಾಕದೆ ಈ ಜಗದ ಸರ್ವ ಜೀವಿಗಳು ನಾವೆಲ್ಲರೂ ಒಂದೇ ಎಂಬ ಭಾವ ಮೂಡಬೇಕು. ಅಪರೂಪದ ಗುಣವನ್ನು ನಿಜವಾದ ಯೋಗಿಯಲ್ಲಿ ಕಾಣಬಹುದು ಎಂದು ಹೇಳುತ್ತಾನೆ. ಈ ಲೋಕದಲ್ಲಿ ಎಲ್ಲರೂ ಹುಟ್ಟಿದ್ದು ಹೊಲೆಯೊಳಗೆ ಆದರೆ ಮುಟ್ಟಿದ್ದು ಮಲಿನವಾಯಿತೆಂದು ಬಾವಿಸಿದರೆ ಈ ಭೂಮಿ, ಸಮುದ್ರಗಳೇಕೆ ಮಲಿನವಾಗಬಾರದು? ಸಣ್ಣ-ಸಣ್ಣ ವಸ್ತುಗಳಿಗೆ ಹೊಲೆಯೆಂಬುದಿದ್ದರೆ ಈ ಪ್ರಕೃತಿಯ ವಿಕಾರಗಳಿಗೇಕೆ ಹೊಲೆಯಿಲ್ಲ ಎಂಬುದು ಪ್ರಶ್ನೆ. ಯೋಗಿಯಾದವನು ಇವೆಲ್ಲವನ್ನು ಕಿತ್ತೊಗೆದು ಯಾವುದೇ ಜಾತಿ, ಕುಲ, ಹೊಲೆಯಿಲ್ಲದ ಶ್ರೇಷ್ಠ ಮನುಜನೆನಿಸುತ್ತಾನೆ.

ಆಸೆಯೆಂಬುದು ಮನುಷ್ಯನ ಸಹಜವಾದ ಗುಣ. ಬಯಸಿದ್ದೆಲ್ಲ ಬೇಕೆನ್ನುವ ಈ ಮಾನವ ಜೀವ ಆಸೆಯಿಂದಾಗುವ ಒಳಿತು ಕೆಡಕುಗಳನ್ನು ಎಣಿಸದೆ ಆಸೆಪಡುವಂತಹದ್ದು ಮಾನವನ ಮೂಲ ಸ್ವಭಾವ. ಯೋಗಿಯಾದವನು ಈ ಆಸೆಯಿಂದ ಮುಕ್ತನಾಗಿರುತ್ತಾನೆಂದು ಹೇಳುವಲ್ಲಿ ಆಸೆಯೆಂಬುದು ವಿಷ ಸರ್ಪವಿದ್ದಂತೆ. ವಿಷ ಸರ್ಪವು ಯಾವಾಗಲೂ ವಿಷವನ್ನೇ ಕಾರುತ್ತದೆ. ಅದಕ್ಕೆ ಹಾಲುಣಿಸಿದರೂ ಪುನಃ ವಿಷವನ್ನೇ ಕಾರುತ್ತದೆ. ಮನುಷ್ಯನಾದವನಿಗೆ ಜಗದ ವಸ್ತುಗಳ ಮೇಲಿರುವ ಆಸೆಯ ವಿಸ್ತಾರವನ್ನು ಹೇಳುವಲ್ಲಿ ಕವಿ ಅದರ ದೂರ ದೃಷ್ಟಿಯನ್ನು ಎತ್ತಿ ಹೇಳುತ್ತಾನೆ. ಆಸೆಗಳನ್ನು ಮರೆತ ಮಾನವನಿಗೆ ಮಾಸಿದುದು ಮಡಿಯಾಗಿ ಶಾಶ್ವತ ಶಿವಯೋಗಿಯಾಗಿ ವಿರಾಜಿಸುತ್ತಾನೆ, ಯೋಗಿಯಾದವನು ಸ್ವಭಾವತಹ ಆಶಾರಹಿತನಾಗಿರುತ್ತಾನೆಂದು ಸೂಚಿಸುತ್ತಾನೆ.

ರಾಗವಿದ್ದರೆ ಭೋಗ । ಭೋಗವಿದ್ದರೆ ರಾಗ ।
ರಾಗದಿ ಸಕಲ ಸಂಪದವು, ಜಗದಿ ವಿ ।
ರಾಗವೇ ಯೋಗ ಸರ್ವಜ್ಞ ॥

ಪ್ರೀತಿಯ ವಿಶಾಲ ಅರ್ಥವನ್ನು ಮಾನವನ ಜೀವನದ ಸಕಲ ಲೇಶಗಳಿಗೂ ಕಾರಣವಾಗುತ್ತದೆ. ಪ್ರೀತಿಯಿಂದಲೇ ಭೋಗ, ಭೋಗದಿಂದಲೇ ರಾಗ, ರಾಗದಿಂದ ಸಕಲ ಸಂಪದವಾಗುತ್ತದೆ, ಆದರೆ ಯೋಗಿಯಾದವನಿಗೆ ವಿರಾಗವೇ ಒಳಿತೆನ್ನುತ್ತಾನೆ. ಮನಸ್ಸಿನಲ್ಲಿ ಸಹಜವಾಗಿ ಉತ್ಪನ್ನವಾಗುವ ರಾಗ ಕ್ರಿಯೆಯನ್ನು ತಡೆಯಬಲ್ಲ ಶಕ್ತಿ ಯೋಗಕ್ಕಿದೆಯೆಂದು ಸಾರುತ್ತಾನೆ. ಆದ್ದರಿಂದಲೆ ಪರಮ ಯೋಗಿಯಾದವನು ಸದಾ ಆಶಾರಹಿತನಾಗಿರುತ್ತಾನೆ ಎಂದು ಸೂಚಿಸುತ್ತಾನೆ. ನಿರ್ವಚನದಲ್ಲಿ ಮೊದಲು ಅರ್ಥ ಮಾಡಿಕೊಳ್ಳಬೇಕಾದುದು ಚಿತ್ತವನ್ನು. ಈ ಚಿತ್ತದ ಸ್ವರೂಪ, ಲಕ್ಷಣಗಳನ್ನು ಅರಿಯಬೇಕು ಅಂತಃಕರಣ, ಬುದ್ಧಿ, ಮನಸ್ಸು ಎಂಬ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ವಸ್ತುವೇ ಚಿತ್ತ. ವಿಷಯ ಗ್ರಹಣ, ಆಲೋಚನೆ ಅಥವಾ ನಿಶ್ಚಯ ಇವೆಲ್ಲವೂ ಇದರ ಲಕ್ಷಣಗಳಾಗಿರುತ್ತವೆ'. ನೀರಿನಲ್ಲಿ ಕಲ್ಲನ್ನು ಬಿಸಾಡಿದಾಗ ಅದರಲ್ಲಿ ಅಲೆಗಳು ಏಳುವಂತೆ ವಿಷಯಜ್ಞಾನ, ಆಲೋಚನೆ, ಭಾವನೆಗಳು ಇವುಗಳುಂಟಾದಾಗ ಚಿತ್ತದಲ್ಲಿ ಏಳುವ 'ಅಲೆ'ಗಳಿಗೆ ಚಿತ್ತ ವೃತ್ತಿಯೆಂದು ಹೆಸರು. 'ಯೋಗ ಚಿತ್ತವೃತ್ತಿ ನಿರೋಧಃ' ಮನಸ್ಸಿನಲ್ಲಿ ಏಳುವ ಅಲೆಗಳ ನಿರೋಧವೇ ಯೋಗ ಎಂದು ಇದರರ್ಥ. ಚಿತ್ತ ಚಾಂಚಲ್ಯದಿಂದ ವೃತ್ತಿಗಳ ವೇಗ ಹೆಚ್ಚುತ್ತದೆ ಇದೇ ದುಃಖ. ಮನಸ್ಸು ಸ್ಥಿರವಾಗಿ ನಿಂತರೆ ಅದೇ ಸುಖ, ನಿರಾಯಾಸವಾಗಿ ಮನಸ್ಸನ್ನು ಸ್ಥಿರಗೊಳಿಸುವ ಕೌಶಲ್ಯವೇ ಯೋಗ.'[೬]

"ಮನಃಪ್ರಶಮನೋಪಾಯಃಯೋಗಇತ್ಯಭಿಧೀಯತೇ"[೭] 'ಮನಸ್ಸನ್ನು ಪ್ರಶಾಂತಗೊಳಿಸುವ ಕ್ರಮಬದ್ಧ ಉಪಾಯವೇ ಯೋಗ ಎನ್ನುವುದು ಈ ವ್ಯಾಕ್ಯದ ಒಂದು ಕೌಶಲ. ಮನಸ್ಸು ಎಂಬುದು ತುಂಬಾ ನಾಜೂಕಿನ ಸಂಗತಿ ಅದನ್ನು ಪಳಗಿಸುವುದಕ್ಕೆ ನಯವಾದ ಯುಕ್ತಿ ಅತ್ಯಗತ್ಯ ಈ ಯುಕ್ತಿ ಯೋಗದಲ್ಲಿರುತ್ತದೆ. ಯೋಗ ಮನಸ್ಸನ್ನು ಸೂಕ್ಷ್ಮ ಸ್ಥಿತಿಯತ್ತಕೊಂಡೊಯ್ದು ಅದನ್ನು ಅರಳಿಸುವ ವಿಧಾನ ಯೋಗ ಮಾರ್ಗಕ್ಕೆ ಗೊತ್ತಿದೆ."[೮] ಸರ್ವಜ್ಞ ತನ್ನ ತ್ರಿಪದಿಯಲ್ಲಿ ಈ ಜಿತೇಂದ್ರಿಯಗಳನ್ನು ಗೆದ್ದವನೇ ನಿಜವಾದ ಯೋಗಿಯೆನ್ನುತ್ತಾನೆ.

ಓದಿ ಬೂದಿಯ ಪೂಸಿ । ತೇದು ಕಾವಿಯ ಹೊದೆದು ।
ಹೋದಾತ ಯೋಗಿಯೆನಬೇಡ, ಇಂದ್ರಿಯವ ।
ಕಾದಾತ ಯೋಗಿ ಸರ್ವಜ್ಞ ॥

ಲೋಕಸಂಚಾರಿಯಾದ ಸರ್ವಜ್ಞ ಇಂತಹ ಸಾದು ಸನ್ಯಾಸಿಗಳನ್ನು ಕಣ್ಣಾರೆ ಕಂಡಿರಬೇಕು. ಅವರ ಅಭಿವ್ಯಕ್ತಿಗಳನ್ನು ಕಿವಿಯಾರೆ ಕೇಳಿರಬೇಕು. ಆದ್ದರಿಂದಲೇ ಸರ್ವಜ್ಞ ಕಂಡದ್ದನ್ನು ಕಂಡದಂತೆ ಹೇಳಿರುವುದಕ್ಕೆ ಈ ಮೇಲಿನ ವಚನ ಸಾಕ್ಷಿಯಾಗಿ ನಿಂತಿದೆ. ವೇದವನ್ನು ಓದಿ ಭಸ್ಮವನ್ನು ಹಚ್ಚಿಕೊಂಡು ನೀಟಾದ ಕಾವಿಯ ಬಟ್ಟೆಯನ್ನು ಹಾಕಿಕೊಂಡರೆ ಆತ ಯೋಗಿಯಲ್ಲ. ಪಂಚೇಂದ್ರಿಯಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಮನಸ್ಸಿನ ಸಮತ್ವವನ್ನು ಕಾಯ್ದುಕೊಳ್ಳುವವನೇ ನಿಜವಾದ ಯೋಗಿಯೆನಿಸುತ್ತಾನೆ.

ಒಡಲು ತಾನಳಿವಲ್ಲಿ । ಮಡದಿಯರು ಮಡಿವಲ್ಲಿ ।
ತಡೆಯಡರು ನಿಂದೆ ಬರುವಲ್ಲಿ, ಸಮತೆಯನು ।
ಬಿಡದಿಹನೆ ಯೋಗಿ ಸರ್ವಜ್ಞ ॥
ಚಂದನವ ಕರಗಿಸಲು । ಬೆಂದು ಪರಿಮಳವಕ್ಕು ।
ಸಂದರಿವನರಿದು ಸತ್ಪುರುಷನೆನಿಸಿಹರು ।
ನೊಂದು ಸೈರಿಪರು ಸರ್ವಜ್ಞ ॥

ಮಾನವನಿಗೆ ಅತ್ಯಂತ ಪ್ರಿಯವಾದುದು ಜೀವ, ಅದರ ರಕ್ಷಣೆಗಾಗಿಯೇ ಮನುಷ್ಯ ಬದುಕಿನುದ್ದಕ್ಕು ತೊಂದರೆ ಪಡುತ್ತಾನೆ. ಆ ತೊಂದರೆ ಗಂಡಾಂತರವಾಗಿ ಸಾವು ಬರಬಹುದು ಎಂದಾಗ ಮನುಷ್ಯನ ಮನಸ್ಸು ಸಂಯಮ ಕಳೆದುಕೊಂಡು ಸಡಿಲಾಗುವ ಸಂಭವವೇ ಹೆಚ್ಚು. ಜೀವದ ಗೆಳತಿ ಎನಿಸಿದ ಪತ್ನಿಯ ಸಾವಿನ ಸಂದರ್ಭದಲ್ಲಿಯೂ ಹಾಗೆ ಆಗುವುದುಂಟು. ಬದುಕಿನಲ್ಲಿ ಬರುವ ತೊಡಕು ತೊಂದರೆಗಳು ಸಾಮಾನ್ಯವಾಗಿ ಮನುಷ್ಯನ ಮನಸ್ಸಿನ

ಸಮತೋಲನವನ್ನು ದಿಕ್ಕು ತಪ್ಪಿಸುತ್ತವೆ. ಇಂತಹ ಯಾವುದೇ ಪ್ರಸಂಗ ಬಂದರೂ ತಾಳ್ಮೆಗೆಡದೆ ತಮ್ಮ ಚಿತ್ತಸ್ವಾಸ್ಥ್ಯವನ್ನು ಕಳೆದುಕೊಳ್ಳದ ಅಪೂರ್ವ ವ್ಯಕ್ತಿಗಳು ಇದ್ದಾರೆ ಅಂತಹವರೇ ಯೋಗ ಸಾಧಕರು. ಸಂಸಾರ ಸಾಗರದೊಳಿದ್ದು ಯೋಗಿಗಳಿಗೆ ಸಹಜವಾದ ಸಮಸ್ಥಿತಿಯನ್ನು ಉಸಿರಾಗಿಸಿಕೊಂಡ ಮಾನವರು ನಿಜವಾಗಿಯೂ ಸತ್ಪುರುಷರು. ಶ್ರೀಗಂಧ ಬೆಂಕಿಯಲ್ಲಿ ಬೆಂದು ಬೂದಿಯಾದರು ಸಹ ತನ್ನ ಪರಿಮಳವನ್ನೇ ಹೊರಸೂಸುವಂತೆ, ಯೋಗ ಸಾಧಕರು ಬದುಕಿನಲ್ಲಿ ಎಂತಹ ಆಪತ್ತು ಬಂದರು ಅದನ್ನು ಸಹಿಸಿಕೊಂಡು ಸಮದರ್ಶಿತ್ವದ ಬದುಕನ್ನು ಕಾಣಬೇಕೆನ್ನುವುದೇ ಸರ್ವಜ್ಞನ ಮನದ ಆಶಯವಾದಂತಿದೆ.

ಮಂಡೆ ಬೋಳಿಸಿಕೊಂಡು, ತುಂಡು ಗಂಬಳಿ ಹೊದೆದು, ಹಿಂಡನಗಲಿದ ಗಜದಂತೆ ಇರುವವರ ಕಂಡು ಇಂತಹವರನ್ನು ಹೇಗೆ ನಂಬಬೇಕು ಎನ್ನುತ್ತಾನೆ. ಇಂತಹವರು ಈ ಲೋಕದಲ್ಲಿ ಬಾಹ್ಯಾಡಂಬರಕ್ಕೆ ಸಮಾಜದ ಮುಗ್ಧ ಜನರನ್ನು ಮೋಸಗೊಳಿಸುವಂತಹ ಕ್ರಿಯೆಗಳಲ್ಲಿ ತೊಡಗಿದವರಿಂದ ಲೋಕ ಕಲ್ಯಾಣವಾಗದು. ನಿಜವಾದ ಸಾದು ಸತ್ಪುರುಷನು ತನ್ನ ಆತ್ಮದಲ್ಲಿಯೇ ಬೇರೆಯವರಿಗೆ ಒಳಿತನ್ನು ಬಯಸುತ್ತಾನೆ.

ಆತುಮದ ಬಣ್ಣವನು । ಮಾತಿನೋಳಗರಿವನ್ನು ।
ಆತುಕೊಂಡರಿತು ಜ್ಯೋತಿಯೊಳು ನೆರೆಬೆರೆದ ।
ದಾತನೇ ಯೋಗಿ ಸರ್ವಜ್ಞ ॥

ಮಾನವರು ಯಾವ ಭೇದ, ಭಾವ, ಮೇಲು, ಕೀಳುಗಳಿಲ್ಲದೆ ಮಾನವ ಕಲ್ಯಾಣಕ್ಕಾಗಿ ಆತ್ಮೋನ್ನತಿಯನ್ನು ಹೊಂದಬೇಕು. ಮನಸ್ಸನ್ನು ಅತಿಯಾಗಿ ಕಲಕದೆ ಸಮದರ್ಶಿತ್ವದ ಸಮಾನತೆಯ ಭಾವವಾಗಿ ವಿಶ್ವಬಂಧುತ್ವದ ವ್ಯಕ್ತವಾಗುವಂತೆ ಆತ್ಮೋನ್ನತಿ ಸಾಧಿಸಬೇಕು. ತನ್ನ ಆತ್ಮದ ನಿಜವಾದ ಅರಿವನ್ನು ಮಾತಿನ ಮೂಲಕ ಜ್ಯೋತಿಯಂತೆ ಬೆಳಗಿಸುವನೇ ಮಹಾನ್ ಯೋಗಿಯಾಗುತ್ತಾನೆ. ಯೋಗಿಯಾಗಿದ್ದವನು ಹೇಗಿದ್ದರೂ ಚಂದವೆ. ಪಕ್ಷಿಗೆ ಸ್ವರ ಚಂದ, ಕುಕ್ಷಿಗೆ ಅಶನ ಚಂದ, ಗಗನಕ್ಕೆ ನಕ್ಷತ್ರ ಚಂದ, ಯೋಗಿಗೆ ಭಿಕ್ಷವೇ ಚಂದವೆನ್ನುತ್ತಾನೆ ಸರ್ವಜ್ಞ. ಸಾಂಸ್ಕೃತಿಕ ಹಿನ್ನೆಲೆಯನ್ನು ಮತ್ತು ಅಧ್ಯಾತ್ಮಿಕ ಆಸಕ್ತಿಗಳ ದೃಷ್ಟಿಯಿಂದ ಸರ್ವಜ್ಞ ಸಾಧುವಾದುದನ್ನೇ ಅಭಿವ್ಯಕ್ತಗೊಳಿಸುತ್ತಾನೆ. ತನ್ನ ಮನದಾಳದ ನಿಗೂಢವಾದ ಪ್ರಜ್ಞೆಯನ್ನು ಮೆರೆಯುವ ರೀತಿ ಅತ್ಯಂತ ಅನನ್ಯವಾದುದು. ತನ್ನ ವ್ಯಕ್ತಿತ್ವದ ಅಂತರಾಳದಲ್ಲಿ ಬೇರೂರಿದ ಜೀವನದ ಪರಿಪಾಠವನ್ನೇ ಸಾಂಕೇತಿಕವಾಗಿ ಬಳಸಿಕೊಂಡಂತಿದೆ. ಕರದಿ ಕಪ್ಪರ ಉಂಟು, ಹಿರಿದುಂಬ ನಾಡುಂಟು ಎಂದು ತಾನೂ ಕೂಡ ಲೋಕ ಕಲ್ಯಾಣಕ್ಕಾಗಿ ತುಂಡು ಗಂಬಳಿ ಹೊದೆದು ಭಿಕ್ಷೆಬೇಡಿ ತಿಂದವನು. ಆ ಸಾತ್ವಿಕ ಅನುಭಾವವೇ ಇಲ್ಲಿ ಮಡುಗಟ್ಟಿ ನಿಂತಿದೆ. ಲೋಕ ಕಲ್ಯಾಣಕ್ಕೆ ರಾಜ ಮಂತ್ರಿಗಳಾಗಬೇಕೆಂದಿಲ್ಲ, ಭಿಕ್ಷೆ ಬೇಡಿ ತಿರಿದುಣ್ಣುವ ಯೋಗಿಗಳಾದರೂ ಸರಿ ಎಂಬ ಭಾವ ಅಡಗಿದೆ. ಭಿಕ್ಷೆ ಬೇಡಿ ತಪಸ್ಸನ್ನು ಮಾಡಿ ಪರರನ್ನು ಕಾಡದೆ ಇತರರ ಒಳಿತನ್ನು ಬಯಸುವವನೇ ಶಿವನೊಳಗೆ ಒಂದಾಗಬಹುದೆಂಬ ಆಶಯ ವ್ಯಕ್ತವಾಗುತ್ತದೆ.

ಕರದಿ ಕಪ್ಪರವುಂಟು । ಹಿರಿದೊಂದು ನಾಡುಂಟು ।
ಹರನೆಂಬ ದೈವ ನಮಗುಂಟು ತಿರಿವರಿಂ ।
ಸಿರಿವಂತರಾರು ? ಸರ್ವಜ್ಞ ॥

ಯೋಗಿಯ ಮನಸ್ಸಿನ ಆಳವನ್ನು ಯೋಗಿಯಾದವನೇ ಬಲ್ಲ. ಅಂತಹ ಯೋಗಿ ಯೋಗದಲ್ಲೇ ಸಮ್ಮಿಲನವಾಗುವುದೆ ನಿಜವಾದ ಯೋಗ. ಸಿದ್ಧಾಂತ ಯೋಗದಿಂದ ಈ ಜಗದ ಎಲ್ಲ ವಿಚಾರಗಳನ್ನು ತಿಳಿ ಹೇಳುವವನೇ ಯೋಗಿ ಎನಿಸುತ್ತಾನೆ. ಮುದ್ದೆಯನು ತಿಂದು, ನಿದ್ದೆಯನು ಹೊಡೆದು, ಹುಸಿ ಸುಳ್ಳುಗಳನ್ನು ಹೇಳುವವನು ಸಿದ್ಧಾಂತ ಯೋಗಿ ಎನಿಸಲಾರ. ತನ್ನ ಮನಸ್ಸಿನ ಕುಟಿಲ–ಕುಯುಕ್ತಿಗಳನ್ನು, ದ್ವೇಷ–ಅಸೂಯೆಗಳನ್ನು, ಸಿಟ್ಟು–ಸೆಡಕುಗಳನ್ನು ವರ್ಜಿಸಿ ತನ್ನ ದಿಟವಾದ ನಿಲುವಿನಿಂದ ತಪನಾಗಿ ಇರುವಾತನೇ ಹಠ ಯೋಗಿ ಎನಿಸುತ್ತಾನೆ. ಯೋಗಿಗಳಾದವರು ಇಂತಹ ಕುಲಭೇದದ ಕಪಟ ಕುಯುಕ್ತಿಗಳ ನಡೆ, ನುಡಿಯಿಂದ, ಅನ್ಯಾಯದಿಂದ ದೂರ ಉಳಿಯಬೇಕೆಂಬುದು ಸರ್ವಜ್ಞನ ಆಶಯ. ಕುಲಭೇದದ ಅನರ್ಥ, ಅನ್ಯಾಯಗಳನ್ನು ಪ್ರತಿಭಟಿಸುವ ಪ್ರಜ್ಞೆ ಸ್ಥೂಲವಾಗಿ ಮಡುಗಟ್ಟಿ ಜೀವನಾನುಭವ ಹರಳುಗಟ್ಟಿದೆ. ಚಿಂತನೆ ಉದ್ದಿಷ್ಟವಾಗಿ ಆಸೆಯ ಅನುಭವವಾಗಿ ಸಮಗ್ರತೆಯಲ್ಲಿ ಐಕ್ಯವಾದಂತಿದೆ. ಮುಂದುವರೆದು ವರಯೋಗಿ ಹೇಗಿರಬೇಕೆಂದು ಹೇಳುವಲ್ಲಿ ಅರವಟಿಗೆ ಯುದಕವನು, ಪರರ ಕೈ ಅನ್ನವನು, ಪರನಿಂದೆ ಪರಹಿಂಸೆ, ಪರಸ್ತ್ರೀಯರನ್ನು ಬಿಟ್ಟವನು ವರಯೋಗಿ ಎನಿಸುತ್ತಾನೆ. ಯೋಗಿಗಳ ಭೇದವನ್ನು ಅತಿಸೂಕ್ಷ್ಮವಾಗಿ ಪರಿಗಣಿಸುತ್ತಾನೆ. ಬತ್ತಿಯು ಎಣ್ಣೆಯನ್ನು ಹೀರಿಕೊಂಡು ನುಣ್ಣನೆ ಒಳಗೊಳಗೆ ಸಣ್ಣದಾಗಿ ಸುಡುತ್ತಾ ಬೆಳಗುವ ದೀಪದಂತೆ ಇರುವುವನೇ ಶಿವಯೋಗಿ ಈತ ಸಣ್ಣಾತನೇನು? ಇಲ್ಲಿ ಕವಿಯ ಆಶಯ ಮಡುಗಟ್ಟಿರುವುದು ಈ ಜಗದ ಉದ್ಧಾರಕ್ಕಾಗಿ. ಸರ್ವಜ್ಞ ಯೋಗಿಗಳಲ್ಲಿ ಕಂಡ ಭೇದ ಲೋಕದ ಉದ್ಧಾರಕ್ಕಾಗಿಯೇ ವಿನಃ ಯಾವ ಸ್ವಾರ್ಥ ಪುರುಷಾರ್ಥಕ್ಕಾಗಿಯೂ ಅಲ್ಲ. ಯೋಗಿಯಾದವನು ತನ್ನ ಭೌತಿಕ ನಿಯಮಗಳನ್ನು ಮೀರಿ ಆತ್ಮ ಸಂತೃಪ್ತವಾದ, ನಿರ್ವಿಕಾರ, ನಿರಪೇಕ್ಷೆ ಭಾವದಿಂದ ಬದುಕನ್ನು ಬೆಳಗಬಲ್ಲ ಯೋಗಿಗಳ ವಿಚಾರವನ್ನು ಸತ್ವಯುತವಾದ ಮಾತುಗಳಲ್ಲಿ ತ್ರಿಪದಿಗಳಲ್ಲಿ ವಚನಗಳಲ್ಲಿ ಕಾಣಬಹುದು.

## ಅಡಿ ಟಿಪ್ಪಣಿ

೧. **ಯೋಗಾಮೃತ:** ಯೋಗಾಚಾರ್ಯ ಎಸ್.ಎಸ್.ಹಿರೇಮಠ. ಪು.೪೬, ಶಿವಪಾರ್ವತಿ ಪ್ರಕಾಶನ ಗದಗ–೨೦೧೬
೨. ಅದೇ ಪು.೪೬.
೩. **ಯೋಗ ದೀಪಿಕ:** ಬಿ.ಕೆ.ಎಸ್.ಅಯ್ಯಂಗಾರ. ಪು.೧ ವಿ.ಕೆ.ಪ್ರ.ಜ.ಮೈಸೂರು–೨೦೦೯
೪. **ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ:** ಭ.ಗೀ. ೨–೪೭
೫. ಯೋಗ ದೀಪಿಕ: ಬಿ.ಕೆ.ಎಸ್.ಅಯ್ಯಂಗಾರ. ಪು.೧೭ ವಿ.ಕೆ.ಪ್ರ.ಜ.ಮೈಸೂರು–೨೦೦೯
೬. **ಯೋಗಾಮೃತ:** ಯೋಗಾಚಾರ್ಯ ಎಸ್.ಎಸ್.ಹಿರೇಮಠ. ಪು.೧, ಶಿವಪಾರ್ವತಿ ಪ್ರಕಾಶನ, ಗದಗ–೨೦೧೬
೭. ಯೋಗ ವಾಸಿಷ್ಠ ಗ್ರಂಥದ ಉಲ್ಲೇಖ
೮. **ಯೋಗಾಮೃತ:** ಯೋಗಾಚಾರ್ಯ ಎಸ್.ಎಸ್.ಹಿರೇಮಠ. ಪು.೧, ಶಿವಪಾರ್ವತಿ ಪ್ರಕಾಶನ, ಗದಗ–೨೦೧೬

## ಪರಾಮರ್ಶನ ಗ್ರಂಥಗಳು

1. ಎಸ್.ಎಸ್.ಹಿರೇಮಠ: ಯೋಗಾಮೃತ
2. ಬಿ.ಕೆ.ಎಸ್.ಅಯ್ಯಂಗಾರ: ಯೋಗ ದೀಪಿಕೆ
3. ಎಸ್.ವಿ.ರಂಗಣ್ಣ: ಸರ್ವಜ್ಞ
4. ರಾಜಶೇಖರ ಜಮದಂಡಿ: ಸರ್ವಜ್ಞನ ವಚನಗಳ ಒಂದು ಜಾನಪದೀಯ ಅಧ್ಯಯನ
5. ಜಿ.ಎಸ್.ಶಿವರುದ್ರಪ್ಪ: ಸಮಗ್ರ ಗದ್ಯ